ವಿಷಯ :- ಸಂತಾನ ನಿರೋಧ ಶಸ್ತ್ರ ಚಿಕಿತ್ಸೆ ಪ್ರೋತ್ಸಾಹ ಧನ

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 382 (2888)

ಶ್ರೀಮತಿ ಎನ್. ಜ್ಯೋತಿ ರೆಡ್ಡಿ (ಗೌರಿಬಿದನೂರು) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಂತಾನ ನಿರೋಧ ಶಸ್ತ್ರ ಚಿಕಿತ್ಸೆಗೆ ಒಳಪಟ್ಟಿರುವವರಿಗೆ ಸರ್ಕಾರದಿಂದ ಕೊಡುವ ಸಹಾಯ ಧನ ಎಷ್ಟು?

ಆ) ಇದರಲ್ಲಿ ಔಷಧಿಗಳಿಗೆ ವಿರ್ಚಾಗುವ ಮೊಬಲಗು ಎಷ್ಟು?

ಇ) ಶಸ್ತ್ರ ಚಿಕಿತ್ಸೆಗೆ ಉಪಯೋಗಿಸುವ ದಾರ ಸರ್ಕಾರದಿಂದ ಒದಗಿಸಲಾಗುವುದೇ?

ಡಾ. ಶ್ರೀ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

ಅ) ಪುರುಷ ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ರೂ. 180 ಹಾಗೂ ಮಹಿಳಾ ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ರೂ. 200 ನ್ನು ಸರ್ಕಾರ ನೀಡುತ್ತದೆ.

ಆ) ಔಷಧಿಗೆಂದು ಪುರುಷ ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ರೂ. 15.00 ಹಾಗೂ ಮಹಿಳಾ ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ರೂ. 25.00 ವಿರ್ಚಾಗುವುದು.

ಇ) ಹೌದು.

ಶ್ರೀಮತಿ ಎನ್. ಜ್ಯೋತಿರೆಡ್ಡಿ :- ಮಾನ್ಯ ಉಪಾಧ್ಯಕ್ಷರೇ, ಪುರುಷ ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ 15 ರೂಪಾಯಿ ಮತ್ತು ಮಹಿಳಾ ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ 25 ರೂಪಾಯಿಗಳನ್ನು ಔಷಧಿಗೆ ವಿರ್ಚಾಗುತ್ತದೆಂದು ಹೇಳಿದ್ದಾರೆ. If my knowledge is correct, it was fixed in the year 1960. My humble request is to enhance this amount because it is not sufficifient for the patients. ಆಗ ಪೆನ್ಸಿಲಿನ್ ರೇಟ್ 75 ಪೈಸೆ ಇತ್ತು. Now it costs Rs. 3 to Rs. 4. ಹಾಗಾಗಿ, ಆವರಿಗೆ ಸರಿಯಾದಂಥ ಆ್ಯಂಟಿಬಯೋಟಿಕ್ಸ್ ಕೊಡತಕ್ಕ ವ್ಯವಸ್ಥೆಯನ್ನು ಮಾಡಿಲ್ಲ, ಇದು ಸರ್ಕಾರಿ ಆಸ್ಪತ್ರೆಗಳಲ್ಲಿ ನಡೆಯುತ್ತಾ ಇಲ್ಲ. ಆದ್ದರಿಂದ, ದಯವಿಟ್ಟು ಇದನ್ನು ಹೆಚ್ಚುಮಾಡಬೇಕೆಂದು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ, ಶಸ್ತ್ರ ಚಿಕಿತ್ಸೆಗೆ ಉಪಯೋಗಿಸುವ ದಾರವನ್ನು ಸರ್ಕಾರದಿಂದಲೇ ಒದಗಿಸುವುದಾಗಿ ಉತ್ತರ ಕೊಟ್ಟಿದ್ದಾರೆ. ಆದರೆ, ಆಸ್ಪತ್ರೆಗಳಲ್ಲಿ, ಇದನ್ನು ರೋಗಿಗಳೇ ತರಬೇಕೆಂದು ಹೇಳು ತ್ತಿದ್ದಾರೆ. ಎಷ್ಟೋ ಸಾರಿ ನಾವು ಮೋಟಿವೇಟ್ ಮಾಡಿ ಕಳುಹಿಸಿದಂತಹ ಹೆಣ್ಣು ಮಕ್ಕಳಿಗೆ ಕ್ಯಾಟ್‌ಗಾಟ್‌ನ್ನು ನಾವೇ ಕೊಡಿಸಿರುವಂತಹ ವ್ಯವಸ್ಥೆಯನ್ನು ನಾವು ನೋಡಿದ್ದೇವೆ. ಆದ್ದರಿಂದ ಇದರ ಬಗ್ಗೆ ಕೂಡ ಸೀರಿಯಸ್ ಆಕ್ಷನ್ ತೆಗೆದುಕೊಳ್ಳಬೇಕು.

Announcement :

Mr. DEPUTY SPEAKER:- Delegates from United States Political Leaders to India headed by Mr. John A. Horhn, State Senator and others are sitting in the Speaker's Gallery. I heartily welcome the distinguished delegates from United States.

(Hon. Members welcomed the delegates by thumping the desks.)

ಡಾ. ಹೆಚ್. ಸಿ. ಮಹದೇವಪ್ಪ :- ಮಾನ್ಯ ಅಧ್ಯಕ್ಷರೇ, 1983 ರ ಕೇಂದ್ರ ಸರ್ಕಾರದ ಮಾರ್ಗ ಸೂಚಿಯಂತೆ ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ಸಂಬಂಧಪಟ್ಟಹಾಗೆ ಹೆಂಗಸರಿಗೆ 250 ರೂಪಾಯಿಗಳು ಗಂಡಸರಿಗೆ 180 ರೂಪಾಯಿಗಳು ಇನ್‌ಸೆಂಟೀವ್ಸ್ ನಾವು ಕೊಡುತ್ತಿದ್ದೇವೆ. ಮತ್ತೆ 25 ರೂಪಾಯಿ ಹೆಂಗಸರಿಗೆ ಮತ್ತು ಗಂಡಸರಿಗೆ 15 ರೂಪಾಯಿಗಳನ್ನು ಈಗ ಕೇಂದ್ರ ಸರ್ಕಾರದ ಮಾರ್ಗಸೂಚಿ ಪ್ರಕಾರ ಕೊಡುತ್ತಿದ್ದೇವೆ. ಈ ಹಣವನ್ನು ಹೆಚ್ಚು ಮಾಡುವುದಕ್ಕೆ ರಾಜ್ಯ ಸರ್ಕಾರಕ್ಕೆ ಆಗದೇ ಇದ್ದರೂ ಕೂಡ ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆಯಲ್ಲಿಟ್ಟುಕೊಂಡು, ಮತ್ತು ಕ್ಯಾಟ್‌ಗ್ಯಾಟ್‌ನ್ನು ರಾಜ್ಯ ಸರ್ಕಾರ ಕೊಡುತ್ತಿದೆ. ಈ ಕ್ಯಾಟ್‌ಗ್ಯಾಟ್‌ನ್ನು ರೋಗಿಗಳೇ ತಂದು ಕೊಡುವಂತಹ ನಿರ್ದಿಷ್ಟವಾದ ಪ್ರಕರಣಗಳು ಯಾವುದಾದರೂ ಇದ್ದರೆ ಮಾನ್ಯ ಸದಸ್ಯರಿಯವರು ನನಗೆ ತಿಳಿಸಿದರೆ ನಾನು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್. ಶಿವಪ್ಪ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿರೆಡ್ಡಿಯವರು ಹೇಳಿದ ವಿಷಯದ ಬಗ್ಗೆ ಕೇಂದ್ರ ಸರ್ಕಾರಕ್ಕೆ ಏನಾದರೂ ಈಗಾಗಲೇ ತಿಳಿಸಿದ್ದೀರೋ? ವೆಚ್ಚ ಬಹಳ ಕಡಿಮೆ ಇದೆ ರೂಪಾಯಿ ಬೆಲೆ ಬಹಳ ಕಡಿಮೆ ಇದೆ. ಇನ್‌ಫ್ಲೇಷನ್‌ನಿಂದ ಮಾರ್ಗಸೂಚಿಯನ್ನು ಬದಲಾವಣೆ ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಶಿಫಾರಸ್ಸು ಮಾಡಿದೆಯೇ?

ಡಾ. ಹೆಚ್. ಸಿ. ಮಹದೇವಪ್ಪ :- ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರ್ಕಾರ ಬದಲಾದಂತಹ ಪರಿಸ್ಥಿತಿಯಲ್ಲಿ ಔಷಧಿಗಳ ದುಬಾರಿ ಬೆಲೆ ಹೆಚ್ಚುತ್ತಿರುವ ಸಂದರ್ಭದಲ್ಲಿ ಜನಸಂಖ್ಯೆಯ ನಿಯಂತ್ರಣ ಮಾಡುವ ಕೆಲಸದಲ್ಲಿ ಸರ್ಕಾರ ಮಹತ್ತರವಾದ ಪಾತ್ರವನ್ನು ವಹಿಸಬೇಕಾದಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಲ್. ಆರ್. ಶಿವರಾಮೇಗೌಡ :- ಮಾನ್ಯ ಅಧ್ಯಕ್ಷರೇ, ಮಾನ್ಯ ಆರೋಗ್ಯ ಇಲಾಖಾ ಸಚಿವರು ಗುತ್ತಿಗೆ ಆಧಾರದ ಮೇಲೆ ವೈದ್ಯಾಧಿಕಾರಿಗಳನ್ನು ತೆಗೆದುಕೊಳ್ಳಬೇಕು ಎಂದು ಎಲ್ಲಾ ಜಿಲ್ಲಾಧಿಕಾರಿಗಳಿಗೂ ಒಂದು ಆದೇಶ ಮಾಡಿ ಕಳುಹಿಸಿಕೊಟ್ಟಿದ್ದೀರಿ. ತಮ್ಮಿಂದ ಆದೇಶ ಹೋಯಿತು. ಈ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಗ್ರಾಮಾಂತರ ಪ್ರದೇಶದಲ್ಲಿ ಎಲ್ಲಿಯೂ ಸಹ ವೈದ್ಯರುಗಳ ಹುದ್ದೆಗಳು ಖಾಲಿ ಇರಬಾರದು ಎನ್ನುವಂತಹ ಉದ್ದೇಶದಿಂದ ಒಂದು ತೀರ್ಮಾನ ಮಾಡಿದ್ದೀರಿ ಅದು ಸ್ವಾಗತಾರ್ಹ. ಮಂಡ್ಯ ಜಿಲ್ಲೆಯಲ್ಲಿ ನಿನ್ನೆ

ಮೊನ್ನೆ ಆರ್ಡರ್ ಕೊಟ್ಟಿದ್ದೀರಿ. ನನ್ನ ಪಕ್ಕದ ಬಾರ್ಡರ್ ಜಿಲ್ಲೆಯಾದ ಹಾಸನ ಜಿಲ್ಲೆಯಲ್ಲಿ ಅವರು ಇನ್ನೂ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಸೆಲೆಕ್ಟ್ ಮಾಡುವಂತಹ ಗೋಜಿಗೆ ಹೋಗಿಲ್ಲ. ನಾನು ನಿನ್ನೆ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಕೇಳಿ ತಿಳಿದುಕೊಂಡಿದ್ದೇನೆ. ತಾವು ಯಾವಾಗ ಡಾಕ್ಟರ್ಸ್‌ನ್ನು ನೇಮಕ ಮಾಡಿಕೊಳ್ಳುತ್ತೀರಿ?

ಡಾ. ಹೆಚ್. ಸಿ. ಮಹದೇವಪ್ಪ :- ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಗೆ ಸಂಬಂಧ ವಿಲ್ಲದಿದ್ದರೂ ಸಹ ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಗಮನದಲ್ಲಿಟ್ಟುಕೊಂಡು ಈಗಾಗಲೇ ಸೂಚನೆಯನ್ನು ಕೊಟ್ಟಿದ್ದೇನೆ, 9 ಜಿಲ್ಲೆಗಳಿಂದ ಪಟ್ಟಿ ಬಂದಿದೆ. ಆ ಪಟ್ಟಿಯನ್ನು ಕ್ಲಿಯರ್ ಮಾಡಿ ಕಳುಹಿಸಿದ್ದೇನೆ. ಹಾಸನ ಜಿಲ್ಲೆಯಿಂದ ಕೂಡ 23 ಖಾಲಿ ಹುದ್ದೆಗಳಿತ್ತು. ಆದರಲ್ಲಿ 13 ಜನ ವೈದ್ಯರ ಪಟ್ಟಿ ಬಂದಿದೆ ಉಳಿದಂತಹ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಶೀಘ್ರದಲ್ಲಿಯೇ ಭರ್ತಿ ಮಾಡಬೇಕೆಂದು ಸೂಚನೆ ಕೊಟ್ಟಿದ್ದೇನೆ. ಉಳಿದಂತಹ ಜಿಲ್ಲೆಗಳಲ್ಲಿ ಅತಿ ಜರೂರಾಗಿ ವೈದ್ಯರ ಹುದ್ದೆಗಳನ್ನು ತುಂಬುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಾನು ಟೆಲಿಕ್ಸ್ ಮೆಸ್ಸೆಜ್‌ನ್ನು ಸಹ ಕಳುಹಿಸುತ್ತಿದ್ದೇನೆ.

ವಿಷಯ :- ಹರಪನಹಳ್ಳಿಯ 50 ಹಾಸಿಗೆಗಳ ಆಸ್ಪತ್ರೆ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 385 (2601)

ಶ್ರೀ. ನಾರಾಯಣದಾಸ್ (ಹರಪನಹಳ್ಳಿ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹರಪನಹಳ್ಳಿಯ ಸಾರ್ವಜನಿಕ ಆಸ್ಪತ್ರೆಯಲ್ಲಿರುವ ಹಾಸಿಗೆಗಳ ಸಂಖ್ಯೆ ಎಷ್ಟು?

ಆ) ಸಾರ್ವಜನಿಕ ಆಸ್ಪತ್ರೆಯಲ್ಲಿ 50 ಕ್ಕಿಂತ ಕಡಿಮೆ ಹಾಸಿಗೆಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಹಾಸಿಗೆಗಳನ್ನು ಯಾವಾಗ ಹೆಚ್ಚಿಸಲಾಗುವುದು?

ಡಾ. ಶ್ರೀ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

ಅ) ಹಾಲಿ 14 ಹಾಸಿಗೆಗಳು ಇರುತ್ತವೆ.

ಆ) ಬಂದಿದೆ.

ಇ) ಹರಪನಹಳ್ಳಿ ಆಸ್ಪತ್ರೆಯನ್ನು 50 ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಿದ್ದು, ಕಟ್ಟಡದ ಕಾಮಗಾರಿ ಕಾರ್ಯ ಪೂರ್ಣಗೊಂಡ ಕಾರಣ ಹೆಚ್ಚುವರಿ ಸಿಬ್ಬಂದಿ, ಆವರ್ತ ಮತ್ತು ಅನಾವರ್ತ ವೆಚ್ಚಗಳ ಮಂಜೂರಾತಿಗಾಗಿ ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಜಿ. ನಾರಾಯಣದಾಸ್ :- ಮಾನ್ಯ ಅಧ್ಯಕ್ಷರೇ, ಈಗ ತಮ್ಮ ಉತ್ತರದಲ್ಲಿ ಹಾಲಿ ಇರತಕ್ಕಂಥಾದ್ದು 14 ಹಾಸಿಗೆಗಳು ಮಾತ್ರ. ಹರಪನಹಳ್ಳಿ ಆಸ್ಪತ್ರೆಯಲ್ಲಿ 50 ಹಾಸಿಗೆಗಳು